ಕೃಷಿ ಉಪ-ನಿರ್ದೇಶರು ಒಂದು ಪೇಳಿಕೆಯನ್ನು ಮೈಸೂರಿನ ಸಹ-ನಿರ್ದೇಶಕರಿಗೆ ಕೊಟ್ಟಿರುತ್ತಾರೆ. ಹಣ ದುರುಪಯೋಗ ಮಾಡಿಕೊಂಡಿರುವುದಾಗಿ ತಿಳಿದು ಬಂದಿರುವುದರ ಕಾರಣ ಅವರ ಮೇಲೆ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗಿದೆ. ಆದುದರಿಂದ ದುರ್ವ್ಯವಹಾರವನ್ನು ಕೂಲಂಕುಷವಾಗಿ ಪರಿಶೀಲಿಸುವವರೆಗೆ ಈ ಅಧಿಕಾರಿಯನ್ನು ಸರ್ಕಾರದ ಕೆಲಸದಿಂದ ದಿನಾಂಕ 3-2-1984ರಲ್ಲಿ ಸಿ ಸಿ ಎ ನಿಬಂಧನೆಯ ಪ್ರಕಾರ ಇವರನ್ನು ಅಮಾನತ್ತಿನಲ್ಲಿಡಲಾಗಿದೆ.ಮೇಲ್ಕಂಡ ನೌಕರನಿಗೆ ಅಮಾನತ್ತಿನ ಅವಧಿಯಲ್ಲಿ ನಿಯಮಗಳ ಪ್ರಕಾರ ಸಲ್ಲಿಸಬೇಕಾದ ಜೀವನಾಧಾರ ಭತ್ಯೆಯನ್ನು ಕಾನೂನು ರೀತ್ಯ ಪಾವತಿ ಮಾಡಲಾಗುವುದು.

ಶ್ರೀ ಕೆ. ವಸಂತ ಬಂಗೇರ. ಗೇರುಕಟ್ಟೆಯಲ್ಲಿ ಇಲಾಖೆಯ ಕಟ್ಟಡಕ್ಕೆ ಹಣ ಮಂಜೂರಾಗಿದ್ದು, ಈ ಕಟ್ಟಡದ ಕೆಲಸ ಪೆಂಡಿಂಗ್‌ನಲ್ಲಿದೆ. ಕಂಟ್ರಾಕ್ಟ್‌ದಾರರು ಕಟ್ಟಡದ, ಅರ್ಧಾಂಶದ ಬಿಲ್ಲನ್ನು ಪಡೆದು ಕೊಂಡು ಪರಾರಿಯಾಗಿದ್ದಾರೆ. ಈ ವಿಷಯ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿದೆಯೇ?

ಶ್ರೀಮತಿ ಚಂದ್ರಪ್ರಭಾ ಅರಸ್.— ಇದರ ವಿವರ ಇಲ್ಲಿ ಇಲ್ಲ, ಹಾಗೇನಾದರೂ ಇಂಥಹದ್ದು ಆಗಿದ್ದರೆ ಕೂಲಂಕುಷವಾಗಿ ಪರಿಶೀಲನೆ ಮಾಡಿ, ಕಂಟ್ರಾಕ್ಟ್‌ದಾರರನ್ನು ಬದಲಾಯಿಸುವುದಕ್ಕೆ ವ್ಯವಸ್ಥೆ ಮಾಡಿ, ಅತಿ ಶೀಘ್ರವಾಗಿ ಕೆಲಸ ಮುಗಿಯುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ : ರೇಷ್ಮೆ ಬೆಳೆಗಾರರಿಗೆ ಆಗುತ್ತಿರುವ ತೊಂದರೆ

ಪ್ರಶ್ನೆ : 226 (442) ಶ್ರೀ ಚೌಡರೆಡ್ಡಿ (ಚಿಂತಾಮಣಿ).— ಮಾನ್ಯ ಸಮಾಜ ಕಲ್ಯಾಣ ಮತ್ತು ರೇಷ್ಮೆ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಚಿಂತಾಮಣಿ ತಾಲ್ಲೂಕಿನಲ್ಲಿ ರೇಷ್ಮೆಗೂಡು ಮಾರುಕಟ್ಟೆ ಖಾಸಗಿಯವರ ಕಟ್ಟಡದಲ್ಲಿದ್ದು ಇದರಿಂದ ರೇಷ್ಮೆ ಬೆಳೆಗಾರರಿಗೆ ಆಗುತ್ತಿರುವ ತೊಂದರೆ ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಈ ರೇಷ್ಮೆ ಗೂಡು ಮಾರುಕಟ್ಟೆಗೆ ಸರ್ಕಾರದವರು ಸ್ವಂತ ಕಟ್ಟಡವೊಂದನ್ನು ನಿರ್ಮಿಸಲು ಉದ್ದೇಶಿಸಿದ್ದಾರೆಯೇ ;

ಇ) ಹಾಗಿದ್ದಲ್ಲಿ, ಈ ಬಗ್ಗೆ ಜಮೀನಿನ ಸ್ವಾಧೀನದ ಕ್ರಮವನ್ನು ತಹಶೀಲ್ದಾರರು ಪ್ರಾರಂಭಿಸಿದ್ದಾರೆಯೇ?

ಉತ್ತರ : ಶ್ರೀಮತಿ ಚಂದ್ರಪ್ರಭಾ ಅರಸ್ (ಸಮಾಜ ಕಲ್ಯಾಣ ಹಾಗೂ ರೇಷ್ಮೆ ಸಚಿವೆ).—

ಅ) ಬಂದಿದೆ. ಆ) ಹೌದು. ಇ) ಪ್ರಾರಂಭಿಸಿದ್ದಾರೆ.

ಮಾನ್ಯ ಸದಸ್ಯರು ಹಾಜರಿರಲಿಲ್ಲ

ಶ್ರೀ ಜಿ.ಕೆ. ವೆಂಕಟಶಿವ ರೆಡ್ಡಿ.— ಮಾನ್ಯ ಅಧ್ಯಕ್ಷರೇ, ರೇಷ್ಮೆ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಅವರು ರೇಷ್ಮೆಗೂಡಿನ ಮಾರುಕಟ್ಟೆಯನ್ನು ಶ್ರೀನಿವಾಸಪುರದಲ್ಲಿ ಮಾಡಬೇಕು ಎಂದು ಸರ್ಕಾರಕ್ಕೆ ಫೇವರಬಲ್ ರಿಪೋರ್ಟ್ ಕಳುಹಿಸಿದ್ದಾರೆಯೇ ?

ಶ್ರೀಮತಿ ಚಂದ್ರಪ್ರಭಾ ಅರಸ್.— ಮಾನ್ಯ ಅಧ್ಯಕ್ಷರೇ, ಇದುವರೆಗೆ ಈ ರಿಪೋರ್ಟ್ ನಮ್ಮ ಗಮನಕ್ಕೆ ಬಂದಿಲ್ಲ. ಇದು ಏನಾದರೂ ಬಂದಲ್ಲಿ ಇದರ ಬಗ್ಗೆ ಅಗತ್ಯ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಈಗ ಶ್ರೀನಿವಾಸಪುರದ ತಾಲ್ಲೂಕಿನಲ್ಲಿ 3,224 ಎಕರೆಗಳಲ್ಲಿ ರೇಷ್ಮೆಯನ್ನು ಬೆಳೆಯುತ್ತಿದ್ದಾರೆ ಪ್ರತಿ ವರ್ಷದ ಉತ್ಪನ್ನ 650 ಟನ್ನುಗಳು. ಚಿಂತಾಮಣಿ, ಮತ್ತು ಮುಳಬಾಗಲು ಮಾರುಕಟ್ಟೆಗೆ ಶ್ರೀನಿವಾಸಪುರದ ಟೌನಿನಿಂದ 25 ಕಿಲೋಮೀಟರ್ ಮಾತ್ರ ದೂರ ಇದೆ. ಅಲ್ಲಿ ಮಾರುಕಟ್ಟೆಯನ್ನು ಸ್ಥಾಪಿಸಲು ನಮಗೆ ಕಷ್ಟವೇನೂ ಇಲ್ಲ. ಅಲ್ಲಿ 45 ರೀಲರ್ಸ್‌ಗಳು ಇದ್ದಾರೆ ಎಂದು ವರದಿ ಇದೆ ಇವರಿಗೆ ಸ್ಪರ್ಧಾತ್ಮಕ ಬೆಲೆ ಸಿಕ್ಕಬೇಕು ಹಾಗೂ ಹೆಚ್ಚಿನ ರೀತಿಯಲ್ಲಿ ಅನುಕೂಲವಾಗಬೇಕು ಎಂದರೆ ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೀಲರ್ಸ್ ಇರಬೇಕಾಗುತ್ತದೆ. ಇಲ್ಲಿ ಮಾರುಕಟ್ಟೆಯನ್ನು ಸ್ಥಾಪಿಸಿದರೆ ರೈತರಿಗೆ ಅನುಕೂಲವಾಗುತ್ತದೆ ಎಂದು ಹೇಳಿದರೆ, ಅದನ್ನು ಸ್ಥಾಪಿಸುತ್ತೇವೆಂದು ತಮ್ಮ ಮೂಲಕ ಭರವಸೆ ಕೊಡುತ್ತೇವೆ.

ಶ್ರೀ ವೆಂಕಟಶಿವ ರೆಡ್ಡಿ.— ಅಧ್ಯಕ್ಷರೇ, ಫೇವರಬಲ್ ರಿಪೋರ್ಟ್ ಕಾಪಿಯನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಶೇಕಡಾ 90ರಷ್ಟು ಭಾಗದ ಜನ ರೈತರು ಈ ಒಂದು ರೇಷ್ಮೆ ಬೆಳೆ ಬೆಳೆಯುತ್ತಿದ್ದಾರೆ ಮತ್ತು ಇದರ ಮೇಲೆಯೇ ಅವಲಂಬಿಸಿದ್ದಾರೆ. ಈಗ ಅವರಿಗೆ ತಮ್ಮ ಗೂಡನ್ನು ಮಾರಾಟ ಮಾಡುವುದಕ್ಕೆ ಸೌಕರ್ಯವಿಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ ಆದುದರಿಂದ ಮಾನ್ಯ ಮಂತ್ರಿಗಳು, ಇದನ್ನು ಗಮನಿಸಿ ಆದಷ್ಟು ಬೇಗ ರೇಷ್ಮೆಗೂಡಿನ ಒಂದು ಮಾರುಕಟ್ಟೆಯನ್ನು ಸ್ಥಾಪನೆ ಮಾಡಬೇಕಾಗಿ ವಿನಂತಿಸುತ್ತೇನೆ.

ಶ್ರೀಮತಿ ಚಂದ್ರಪ್ರಭಾ ಅರಸ್.— ಮಾನ್ಯ ಅಧ್ಯಕ್ಷರೆ, ನಾನು ಮೊದಲೇ ತಿಳಿಸಿದ ಹಾಗೆ, ರೇಷ್ಮೆ ಉದ್ಯಮ ನಮ್ಮ ರಾಜ್ಯದಲ್ಲಿ ವ್ಯಾಪಕವಾಗಿ ವಿಸ್ತಾರಗೊಳ್ಳುತ್ತಿರುವುದು ಬಹಳ ಹೆಮ್ಮೆಯ ಸಂಗತಿ. ರೈತರಿಗೆ ಒಳ್ಳೆಯ ಬೆಲೆ ಬೇಕಾಗಿದೆ. ಮತ್ತು ಅವರಿಗೆ ಉತ್ತಮ ಮಾರುಕಟ್ಟೆ ಸಿಗಬೇಕು ಎನ್ನುವ ಇಚ್ಛೆ ಇರುವುದರಿಂದ, ಮಾನ್ಯ ಸದಸ್ಯರು ತಿಳಿಸಿದಂತೆ, ಮಾರುಕಟ್ಟೆ ಇಲ್ಲದೆ ರೈತ ಬೆಳೆಗಾರರಿಗೆ ತೊಂದರೆಯಾಗಿದ್ದರೆ ಇನ್ನೊಂದು ಹೊಸ ಮಾರುಕಟ್ಟೆಯನ್ನು ಪ್ರಾರಂಭ ಮಾಡುವುದಕ್ಕೆ ನಮ್ಮ ಅಭ್ಯಂತರ ವೇನೂ ಇಲ್ಲ, ಪ್ರಯತ್ನ ಮಾಡುತ್ತೇವೆ;